ಇರುವ ಪ್ರಕರಣಗಳಲ್ಲಿ ಮಾತ್ರ ಮಾಹಿತಿ ನೀಡುವ ವರೆಗೆ ಸಿಲಿಂಡರ್‌ಗಳನ್ನು ನೀಡಬಾರದು ಎಂದು ಆದೇಶಿಸಲಾಗಿದೆ. ಆದರೆ, ಸದರಿ ಪ್ರಕರಣಗಳಲ್ಲಿಯೂ ಸಹ ರದ್ದು ಪಡಿಸಲು ಆದೇಶ ಮಾಡಿರುವುದಿಲ್ಲ.

8. ರಿಯಾಯ್ತಿ ದರದ LPG ಯ ದುರುಪಯೋಗವನ್ನು ತಡೆದಿರುವುದು ಮಾತ್ರವಲ್ಲದೆ ಪ್ರತಿ ತಿಂಗಳು ಸುಮಾರು ರೂ.100 ಕೋಟಿಯಷ್ಟು ಸರ್ಕಾರಕ್ಕೆ ನಷ್ಟವನ್ನು ತಡೆದಂತೆ ಆಗಿರುತ್ತದೆ.

ರಾಜ್ಯದಲ್ಲಿ ವಿದ್ಯುತ್ ಕೊರತೆ

206 (497) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್):–ಮಾನ್ಯ ಇಂಧನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯಕ್ಕೆ ಪ್ರತಿದಿನ ಬೇಕಾಗಿರುವ ವಿದ್ಯುತ್ ಪ್ರಮಾಣ ಎಷ್ಟು;

ಆ) ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ ಎಷ್ಟು;

ಇ) ಹೊರ ರಾಜ್ಯಗಳಿಂದ ಹಾಗೂ ಕೇಂದ್ರದ ಗ್ರಿಡ್‌ನಿಂದ ಬರತಕ್ಕ ವಿದ್ಯುತ್ ಎಷ್ಟು;

ಈ) ಖಾಸಗಿಯಾಗಿ ಖರೀದಿಸಿದ ವಿದ್ಯುತ್ ಎಷ್ಟು;

ಉ) ಖಾಸಗಿ ಸಂಸ್ಥೆಗಳಿಗೆ ಸಕ್ಕರೆ ಕಾರ್ಖಾನೆಗಳಿಗೆ ಹಾಗೂ ಹೊರ ರಾಜ್ಯಗಳಿಂದ ಯಾವ ದರದಲ್ಲಿ ವಿದ್ಯುತ್ ಖರೀದಿಸಲಾಗಿದೆ;

ಊ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶೋಭಾ ಕರಂದ್ಲಾಜೆ (ಇಂಧನ ಸಚಿವರು):–

ಅ) ಪ್ರಸ್ತುತ ರಾಜ್ಯದಲ್ಲಿನ ದೈನಂದಿನ ನಿರ್ಬಂಧಿತ ವಿದ್ಯುತ್ ಬೇಡಿಕೆಯು ಸರಾಸರಿ ಸುಮಾರು 150 ದಶಲಕ್ಷ ಯೂನಿಟ್‌ಗಳಾಗಿರುತ್ತದೆ. ಅನಿರ್ಬಂದಿತ ವಿದ್ಯುತ್ ಬೇಡಿಕೆಯ ಸುಮಾರು 175 ದಶಲಕ್ಷ ಯೂನಿಟ್‌ಗಳಾಗಿರುತ್ತದೆ.

ಆ) ಪ್ರಸ್ತುತ, ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ದಿನವಹಿ ಸರಾಸರಿ ವಿದ್ಯುತ್‌ನ ಪ್ರಮಾಣ 95.3 ದಶಲಕ್ಷ ಯೂನಿಟ್‌ಗಳಾಗಿರುತ್ತದೆ.

ಇ) ಪ್ರಸ್ತುತ ಹೊರ ರಾಜ್ಯಗಳಿಂದ ಸರಬರಾಜಾಗುತ್ತಿರುವ ವಿದ್ಯುತ್ ಪ್ರಮಾಣವು ದಿನವಹಿ ಸರಾಸರಿ 1.6 ದಶಲಕ್ಷ ಯೂನಿಟ್‌ಗಳು ಹಾಗೂ ಕೇಂದ್ರೀಯ ವಿದ್ಯುತ್ ಸ್ಥಾವರಗಳಿಂದ ರಾಜ್ಯದ ಪಾಲಾದ ದಿನವಹಿ ಸರಾಸರಿ ವಿದ್ಯುತ್ ಪ್ರಮಾಣವು 30.3 ದಶಲಕ್ಷ ಯೂನಿಟ್‌ಗಳು.

ಈ) ಪ್ರಸ್ತುತ, ರಾಜ್ಯ ಸರ್ಕಾವರು 2011–12ರಲ್ಲಿ (ಏಪ್ರಿಲ್ 11 ರಿಂದ ಅಕ್ಟೋಬರ್ 11 ರವರೆಗೆ) ಒಟ್ಟು 2892.58 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್‌ನ್ನು ಖಾಸಗಿ ವಿದ್ಯುತ್ ಉತ್ಪಾದಕರಿಂದ ಖರೀದಿಸಲಾಗಿದೆ.

ಊ) ಪ್ರಸ್ತುತ, ವರ್ಷದಲ್ಲಿ ಪಿ.ಪಿ.ಎ. ಇಲ್ಲದ ಸಕ್ಕರೆ ಕಾರ್ಖಾನೆಗಳಿಂದ ಯಾವುದೇ ವಿದ್ಯುತ್ತನ್ನು ಖರೀದಿಸಿರುವುದಿಲ್ಲ. ಪಿ.ಪಿ.ಎ. ಇರುವ ಸಕ್ಕರೆ ಕಾರ್ಖಾನೆಗಳಿಗೆ ಕರ್ನಾಟಕ ವಿದ್ಯುತ್‌ಚ್ಛಕ್ತಿ ನಿಯಂತ್ರಣ ಆಯೋಗ ನಿರ್ದರಿಸಿದ ದರವನ್ನು ನೀಡಲಾಗುತ್ತಿದೆ.

2011–12ನೇ ಸಾಲಿನಲ್ಲಿ (ನವೆಂಬರ್ 11ರ ಅಂತ್ಯಕ್ಕೆ) ರಾಜ್ಯ ಸರ್ಕಾರವು ಖಾಸಗಿ ಸಂಸ್ಥೆಗಳನ್ನು ಒಳಗೊಂಡಂತೆ ಹೊರ ರಾಜ್ಯಗಳಿಂದ ಖರೀದಿಸಲಾದ ವಿದ್ಯುತ್‌ನ ಸರಾಸರಿ ದರ ಪ್ರತಿ ಯೂನಿಟ್ಟಿಗೆ ಈ ಕೆಳಕಂಡಂತಿವೆ:

ಕ್ರಮ ಸಂಖ್ಯೆ	ಕಂಪನಿಯ ಹೆಸರು		ಸರಾಸರಿ ಖರೀದಿ ದರ ಪ್ರತಿ ಯೂನಿಟ್ಟಿಗೆ (ರೂ.ಗಳಲ್ಲಿ)
	ಅಲ್ಪಾವಧಿ ವಿದ್ಯುತ್		
1	ಪಿ.ಟಿ.ಸಿ.ಐ.ಎಲ್.	...	3.86
2	ಎನ್.ಟಿ.ಪಿ.ಸಿ. (ವಿವಿಎನ್‌ಎಲ್)	...	5.65
3	ಎನ್.ಇ.ಟಿ.ಎಸ್.	...	4.57
4	ಪಿ.ಟಿ.ಸಿ.ಐ.ಎಲ್. (ಛತ್ತೀಸ್‌ಗಢ)	...	4.75
5	ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್	...	4.51
6	ಪಿ.ಎಕ್ಸ್.ಐ.ಎಲ್.	...	4.63
7	ಹರೇಕೃಷ್ಣ	...	4.26
	ಮಧ್ಯಾಮಾವಧಿ ವಿದ್ಯುತ್		
1	ಎನ್.ಇ.ಟಿ.ಎಸ್.	...	3.75
	ಗರಿಷ್ಠ ಬೇಡಿಕೆ ಅವಧಿ ವಿದ್ಯುತ್		
1	ಎನ್.ಇ.ಟಿ.ಎಸ್.	...	7.07
2	ಟಾಟಾ ಪವರ್	...	5.36
3	ಪಿ.ಟಿ.ಸಿ.ಐ.ಎಲ್.	...	5.39

ಋ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ರಾಮಲಿಂಗಾರೆಡ್ಡಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 497ಕ್ಕೆ ಅನುಬಂಧ:-

➢ ರಾಜ್ಯ ಮತ್ತು ಕೇಂದ್ರ ವಲಯದ ಯೋಜನೆಗಳಿಂದ ಹಾಗೂ ಇತರೆ ಯೋಜನೆಗಳಿಂದ ರಾಜ್ಯದ ವಿದ್ಯುತ್ ಜಾಲಕ್ಕೆ ಸೇರ್ಪಡೆಗೊಳ್ಳಬಹುದೆಂದು ನಿರೀಕ್ಷಿಸಲಾಗಿರುವ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ವರ್ಷವಾರು ವಿವರಗಳು ಈ ಕೆಳಕಂಡಂತಿವೆ:-

(ಮೆಗಾ ವ್ಯಾಟ್‌ಗಳಲ್ಲಿ)

ವರ್ಷ	ಕೇಂದ್ರ ವಲಯ	ರಾಜ್ಯ ವಲಯ	ಇತರೆ	ಒಟ್ಟು
2011-12	802	500	957	2,,259
2012-13	195	00	300	495
2013-14	00	2,130	745	2,875
2014-15	71	1,850	2,059	3,980
2015-16	1,064	2,430	1,426	4,920
2016-17	932	480	341	1,753
2017-18	640	00	663	1,303
2018-19	240	00	865	1,105
2019-20	120	00	808	928
2020-21	00	00	486	486
ಒಟ್ಟು	4,064	7,390	8,650	20,104

ರಾಜ್ಯ ವಲಯ (ಕೆಪಿಸಿ.ಎಲ್.) ಯೋಜನೆಗಳು:

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಒಟ್ಟು ಸಾಮರ್ಥ್ಯ (ಮೆ.ವ್ಯಾ.ಗಳಲ್ಲಿ)	ಯೋಜನೆಯ ಕಾರ್ಯಾರಂಭದ ಪ್ರಸ್ತಾವಿತ ದಿನಾಂಕ
1	ಬಿ.ಟಿ.ಪಿ.ಎಸ್. ಘಟಕ- 2(1*500)	500	ನವೆಂಬರ್-2011
2	ಬಿ.ಟಿ.ಪಿ.ಎಸ್. ಘಟಕ- 3 (1*700)	700	2014
3	ಬಿಡದಿ ಅನಿಲ ಆಧಾರಿತ ಯೋಜನೆಯ ಘಟಕ-1(1*700)	700	2014
4	ಮುನಿರಾಬಾದ್ (1*10)	10	2014
5	ಜಿ.ಹೆಚ್.ಇ.ಪಿ (1*20)	20	2014
6	ಶರಾವತಿ ಘಟಕ -ಗಿಂದ 6 (6*350)	2,100	2013-15
7	ಯರಮರಸ್ ಘಟಕ-1 ಮತ್ತು 2 (2*800)	1,600	2014-16
8	ಯಡ್ಲಾಪುರ (1*800)	800	2015
9	ಛತ್ತೀಸ್‌ಘಡ್ ಘಟಕ-1, 2 (2*800) (ರಾಜ್ಯದ ಪಾಲು)	960	2015-2017
	ಒಟ್ಟು	7,390	

ಕೇಂದ್ರ ವಲಯದ ಯೋಜನೆಗಳು:

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಒಟ್ಟು ಸಾಮರ್ಥ್ಯ (ಮೆ.ವ್ಯಾಗಳಲ್ಲಿ)	ರಾಜ್ಯದ ಪಾಲು (ಮೆ.ವ್ಯಾಗಳಲ್ಲಿ)	ಯೋಜನೆಯ ಕಾರ್ಯಾರಂಭದ ಪ್ರಸ್ತಾವಿತ ದಿನಾಂಕ
1	ಸಿಂಹಾದ್ರಿ-ಘಟ್ಟ-2 ಘಟಕ-1 ಮತ್ತು 2 (2*500)	1,000	176	ಘಟಕ-1 ವಿದ್ಯುತ್ ಜಾಲಕ್ಕೆ ದಿನಾಂಕ 2ನೇ ಎಪ್ರಿಲ್-2011 ರಂದು ಸಮನ್ವಯಗೊಂಡಿರುತ್ತದೆ., ಘಟಕ-2- ಜನವರಿ 2012
2	ಎನ್.ಎಲ್.ಸಿ. ಎಕ್ಸ್‌ಟೆಂಷನ್ ಘಟಕ-1 ಮತ್ತು 2 (2*250)	500	110	ಘಟಕ -1: ಜೂಲೈ 2011; ಘಟಕ -2: ಮಾರ್ಚ್-2012
3	ಕುದನ್ ಕುಲಮ್ ಘಟಕ 1 ಮತ್ತು 2 (2*1000)	2,000	442	ಘಟಕ -1-ಜೂನ್ -2011, ಘಟಕ -2 ಮಾರ್ಚ್ -2012
4	ವಲ್ಲೂರು ಘಟಕ-1, 2 ಮತ್ತು 3 (3*500)	1,500	111	ಘಟಕ -1: ಅಕ್ಟೋಬರ್-2011 ಘಟಕ -2: ಜನವರಿ-2012, ಘಟಕ -3: ಡಿಸೆಂಬರ್-2012
5	ಟುಟಿಕಾರಿನ್ ಘಟಕ-1 ಮತ್ತು 2 (2*500)	1,000	158	ಘಟಕ -1: ಆಗಸ್ಟ್ -2012 ಘಟಕ -2: ಅಕ್ಟೋಬರ್-2012
6	ನೈವೇಲಿ ಘಟಕ-1 ಮತ್ತು 2 (2*500)	1,000	71	2014-15
7	ಸಿರ್‌ಕಾಳಿ ಘಟಕ-1, 2 ಮತ್ತು 3 (3*660)	1,980	396	2015-17
8	ಕುಡೊಗಿ ಘಟಕ-1 ರಿಂದ 5 (5*800)	4,000	2,000	2015-18
9	ಮಡಿಮಡಕೆ ಘಟಕ-1 ರಿಂದ 5 (5*800)	4,000	600	2017-20
	ಒಟ್ಟು	**16,980**	**4,064**	

ಯು.ಎಂ.ಪಿ.ಪಿ ಯೋಜನೆಗಳು

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಒಟ್ಟು ಸಾಮರ್ಥ್ಯ (ಮೆ.ವ್ಯಾಗಳಲ್ಲಿ)	ರಾಜ್ಯದ ಪಾಲು (ಮೆ.ವ್ಯಾಗಳಲ್ಲಿ)	ಯೋಜನೆಯ ಕಾರ್ಯಾರಂಭದ ಪ್ರಸ್ತಾವಿತ ದಿನಾಂಕ
1	ಕೃಷ್ಣಪಟ್ಟಂ ಯು.ಎಂ.ಪಿ.ಪಿ. ಘಟಕ-1 ರಿಂದ 6 (6*660)	3,960	798	ಘಟಕ -1:ಜೂನ್-2013, ಘಟಕ -2: ಅಕ್ಟೋಬರ್-2013, ಘಟಕ -3: ಫೆಬ್ರವರಿ-2014, ಘಟಕ -4: ಜೂನ್-2014, ಘಟಕ -5:ಅಕ್ಟೋಬರ್ -2014,

				ಘಟಕ –6: ಫೆಬ್ರವರಿ–2015
2	ಒರಿಸ್ಸಾ ಯು.ಎಂ.ಪಿ.ಪಿ.	4,000	347	2016–20
3	ಚಿಯ್ಯೂರ್ ಯು.ಎಂ..ಪಿ.ಪಿ.	4,000	792	2017–20
4	ಮುಂಗೆ ಯು.ಎಂ.ಪಿ.ಪಿ.	4,000	495	2018–21
5	ಆಂಧ್ರ 2ನೇ ಯು.ಎಂ.ಪಿ.ಪಿ.	4,000	114	2018–21
	ಒಟ್ಟು	19,960	2,546	

ಪಿ.ಸಿ.ಕೆ.ಎಲ್ ಯೋಜನೆಗಳು:

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಒಟ್ಟು ಸಾಮರ್ಥ್ಯ (ಮೆ.ವ್ಯಾಗಳಲ್ಲಿ)	ರಾಜ್ಯದ ಪಾಲು (ಮೆ.ವ್ಯಾಗಳಲ್ಲಿ)	ಯೋಜನೆಯ ಕಾರ್ಯಾರಂಭದ ಪ್ರಸ್ತಾವಿತ ದಿನಾಂಕ
1	ಯು.ಪಿ.ಸಿ.ಎಲ್. ಘಟಕ–2 (1*600)	600	540	ಘಟಕ–2:ವಿದ್ಯುತ್ ಜಾಲಕ್ಕೆ 7ನೇ ಮಾರ್ಚ್ 2011 ರಂದು ಸಮನ್ವಯಗೊಂಡಿರುತ್ತದೆ.
2	ಹಾಸನ (1*500)	500	500	2015–16
3	ಅನಿಲ ಆಧಾರಿತ ವಿದ್ಯುತ್ ಯೋಜನೆ, ಕೇಸ್–2 ಅಡಿಯಲ್ಲಿ; ಘಟಕ– 1 ಮತ್ತು 2 (2*350)	700	700	ಘಟಕ –1: ಜನವರಿ–2015, ಘಟಕ –2:ಮೇ 2015
4	ಗುಲ್ಬರ್ಗಾ ಘಟಕ–1 ಮತ್ತು 2 (2*660)	1,320	1,320	ಘಟಕ –1: ಮಾರ್ಚ್–2015, ಘಟಕ –2: ಸೆಪ್ಟಂಬರ್– 2015
5	ಜುರಾಲ ಘಟಕ –1ರಿಂದ 6 (6*39)	234	117	ಕಾರ್ಯಾರಂಭಿಸಿದವೆ ಘಟಕಗಳು ಘಟಕ –1: 28–03–2008; ಘಟಕ –2: 31–08–2008; ಘಟಕ –3: 28–05–2009 ಘಟಕ –4; ಆಗಸ್ಟ್ 2010 ಘಟಕ –5: ಫೆಬ್ರವರಿ 2011 ಕಾರ್ಯಾರಂಭಿಸಬೇಕಾಗಿರುವ ಘಟಕ –6: ಜೂನ್ –2011 ಜುರಾಲದಿಂದ ರಾಯಚೂರಿಗೆ 220 ಕೆ.ವಿ. ಹೊಡಿ ಪ್ರಸರಣ ಮಾರ್ಗದ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.
	ಒಟ್ಟು	3,354	3,177	

ಎನ್.ಸಿ.ಇ ಯೋಜನೆಗಳು:

(ಮೆ.ವ್ಯಾಗಳಲ್ಲಿ)

2011–12	300	2016–17	283
2012–13	300	2017–18	283
2013–14	346	2018–19	283
2014–15	283	2019–20	283
2015–16	283	2020–21	283
		ಒಟ್ಟು	2,927